# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 609 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.12.2021 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಹಂತದ ಕಛೇರಿಗಳು ಯಾವುವು; ಅವುಗಳಲ್ಲಿ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಕೊರತೆಯನ್ನು ಯಾವಾಗ ತುಂಬಲಾಗುವುದು) | ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಹಂತದ ಕಛೇರಿಗಳ ವಿವರ ಈ ಕೆಳಗಿನಂತೆ ಇರುತ್ತವೆ.<br>1. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಉಡುಪಿ ಜಿಲ್ಲೆ.<br>2. ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ.<br>3. ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕುಂದಾಪುರ ತಾಲ್ಲೂಕು. ಉಡುಪಿ ಜಿಲ್ಲೆ.<br>4. ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ ಕಾರ್ಕಳ ತಾಲ್ಲೂಕು. ಉಡುಪಿ ಜಿಲ್ಲೆ<br><br>ಸದರಿ ಜಿಲ್ಲೆಗೆ ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಹಾಗೂ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರಗಳು ಕೆಳಗಿನಂತಿವೆ. |

| ಕ್ರ. ಸಂ | ವರ್ಗ | ಮಂಜೂರಾದ ಹುದ್ದೆ | ಭರ್ತಿ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1 | ಎ | 1 | 1 | 0 |
| 2 | ಬಿ | 5 | 1 | 4 |
| 3 | ಸಿ | 66 | 21 | 45 |
| 4 | ಡಿ | 186 | 111 | 75 |
| | | **258** | **134** | **124** |

- ಉಡುಪಿ ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿ ಒಟ್ಟಾರೆ ಖಾಲಿ ಇರುವ ಗ್ರೂಪ್ –ಬಿ ಹುದ್ದೆಗಳನ್ನು ತುಂಬಲು ಅನುಮೋದನೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದೆ.
- ಕೆ.ಪಿ.ಎಸ್.ಸಿ ಯಿಂದ ಸ್ವೀಕೃತಿಗೊಂಡ ಪ್ರ.ದ.ಸ -58, ದ್ವಿ.ದ.ಸ-70 ಹುದ್ದೆಗಳನ್ನು ಕೌನ್ಸಿಲಿಂಗ್ ಮೂಲಕ ಜುಲೈ-2021ರಲ್ಲಿ ಭರ್ತಿ ಮಾಡಲಾಗಿದೆ.
- ಖಾಲಿ ಇರುವ ಗ್ರೂಪ್ –ಸಿ ಹುದ್ದೆಗಳ ಪೈಕಿ ನಿಲಯ ಮೇಲ್ವಿಚಾರಕರ (ಮಹಿಳೆ) ಹುದ್ದೆಗಳನ್ನು ತುಂಬಲು ಈಗಾಗಲೇ ಕೆ.ಪಿ.ಎಸ್.ಸಿ ಯಿಂದ ಅಂತಿಮ ಆಯ್ಕೆ ಪಟ್ಟಿ ದಿನಾಂಕ:16-11-2021ರಂದು ಸ್ವೀಕೃತಿಗೊಂಡಿದ್ದು, ಅದರಂತೆ ಅಭ್ಯರ್ಥಿಗಳ ಸಿಂದುತ್ವ ಪ್ರಮಾಣ ಪತ್ರ ಪೋಲೀಸ್ ವರದಿಯನ್ನು ಪಡೆಯಲು ಕ್ರಮವಹಿಸಲಾಗಿರುತ್ತದೆ.

...2

| | | |
|---|---|---|
| | | ಸದರಿ ದಾಖಲಾತಿಗಳು ಹಾಗೂ ಪ್ರಮಾಣ ಪತ್ರಗಳ ನೈಜತೆ ವರದಿಗಳು ಸ್ವೀಕೃತಿಗೊಂಡ ಕೂಡಲೆ ನಿಯಮಾನುಸಾರ ನೇಮಕಾತಿ ಆದೇಶ ನೀಡಲಾಗುವುದು.<br>• ಖಾಲಿ ಇರುವ ಗ್ರೂಪ್ -ಸಿ ಹುದ್ದೆಗಳ ಪೈಕಿ ನಿಲಯ ಮೇಲ್ವಿಚಾರಕರ (ಪುರುಷ) ಹುದ್ದೆಗಳನ್ನು ತುಂಬಲು ಕೆ.ಪಿ.ಎಸ.ಸಿ ಯಿಂದ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದ್ದು, ಅಂತಿಮ ಆಯ್ಕೆ ಪಟ್ಟಿ ನಿರೀಕ್ಷಿಸಲಾಗಿದೆ.<br>ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳನ್ನು ಹೊರಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲಾಗುತ್ತಿದೆ. |
| ಆ) | ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಹಾಸ್ಟೆಲ್ ಗಳ ಸಂಖ್ಯೆ ಎಷ್ಟು; ಅವುಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಹಾಸ್ಟೆಲ್ ಗಳ ಸಂಖ್ಯೆ ಎಷ್ಟು; ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ಹಾಸ್ಟೆಲ್ ಗಳ ಸಂಖ್ಯೆ ಎಷ್ಟು; ಅವುಗಳ ವಿದ್ಯಾರ್ಥಿಗಳ ಸಾಮರ್ಥ್ಯ ವೆಷ್ಟು; ಖಾಲಿಯಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; | ಉಡುಪಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಒಟ್ಟು 41 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.<br>ಈ ಪೈಕಿ 21 ಬಾಲಕರ ಮತ್ತು 20 ಬಾಲಕಿಯರ ವಿದ್ಯಾರ್ಥಿನಿಲಯಗಳಾಗಿರುತ್ತವೆ.<br>ಉಡುಪಿ ಜಿಲ್ಲೆಯಲ್ಲಿನ ಒಟ್ಟು 41 ವಿದ್ಯಾರ್ಥಿನಿಲಯಗಳ ಪೈಕಿ 18 ಮೆಟ್ರಿಕ್-ಪೂರ್ವ ಮತ್ತು 23 ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಾಗಿರುತ್ತವೆ.<br>ಈ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ಖಾಲಿಯಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |
| ಇ) | ಅವುಗಳಲ್ಲಿ ಸ್ವಂತ ಕಟ್ಟಡಗಳಲ್ಲಿ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್ ಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸದೇ ಇರುವ ಕಟ್ಟಡಗಳ ಸಂಖ್ಯೆ ಎಷ್ಟು; ಈ ಕಟ್ಟಡಗಳ ಸದ್ಬಳಕೆಗೆ ಇಲಾಖೆಯ ಕ್ರಮವೇನು; (ತಾಲ್ಲೂಕುವಾರು ಹಾಸ್ಟೆಲ್ ವಾರು ಮಾಹಿತಿಯನ್ನು ನೀಡುವುದು) | ಉಡುಪಿ ಜಿಲ್ಲೆಯಲ್ಲಿನ ಒಟ್ಟು 41 ವಿದ್ಯಾರ್ಥಿನಿಲಯಗಳ ಪೈಕಿ 29 ವಿದ್ಯಾರ್ಥಿನಿಲಯಗಳು ಸ್ವಂತ ಕಟ್ಟಡಗಳಲ್ಲಿ 3 ವಿದ್ಯಾರ್ಥಿನಿಲಯಗಳು ಉಚಿತ ಕಟ್ಟಡಗಳಲ್ಲಿ ಹಾಗೂ 9 ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.<br>ತಾಲ್ಲೂಕುವಾರು, ವಿದ್ಯಾರ್ಥಿನಿಲಯವಾರು ವಿವರಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ.<br>ಈ ಪೈಕಿ ಕಾರ್ಯನಿರ್ವಹಿಸದೇ ಇರುವ ವಿದ್ಯಾರ್ಥಿನಿಲಯಗಳ ಕಟ್ಟಡಗಳು ಯಾವುದೂ ಇರುವುದಿಲ್ಲ. |
| ಈ) | ಉಡುಪಿ ಜಿಲ್ಲೆಯಲ್ಲಿ ಯಡಾಡಿ ಮತ್ಯಾಡಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿಶಾಲೆಯನ್ನು ಯಾವಾಗ ಪ್ರಾರಂಭಿಸಲಾಯಿತು; ಇದರ ವಿದ್ಯಾರ್ಥಿಗಳ ಸಾಮರ್ಥ್ಯ ವೆಷ್ಟು; ಖಾಲಿಯಿರುವ ಸೀಟುಗಳ ಸಂಖ್ಯೆ ಎಷ್ಟು; ಶಾಲೆಗೆ ಮಂಜೂರಾತಿಯಾದ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯನ್ನು ಯಾವಾಗ ತುಂಬಲಾಗುವುದು; (ಹುದ್ದೆವಾರು, ಸಿಬ್ಬಂದಿವಾರು ಮಾಹಿತಿ ಒದಗಿಸುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು ಯಡಾಡಿ ಮತ್ಯಾಡಿ (ಕೋಟೇಶ್ವರ), ಗ್ರಾಮದಲ್ಲಿ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ, 2008ರಲ್ಲಿ ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿರುತ್ತದೆ.<br>ಸದರಿ ವಸತಿ ಶಾಲೆಯಲ್ಲಿ ಪ್ರತಿ ತರಗತಿಗೆ 50 ವಿದ್ಯಾರ್ಥಿಗಳಂತೆ 250 ವಿದ್ಯಾರ್ಥಿಗಳ ಸಂಖ್ಯಾಬಲ ಹೊಂದಿದ್ದು, ಪ್ರಸ್ತುತ 216 ವಿದ್ಯಾರ್ಥಿಗಳ ದಾಖಲಾಗಿರುತ್ತಾರೆ.<br>34 ಸೀಟುಗಳು ಖಾಲಿಯಿರುತ್ತವೆ. (6ನೇ ತರಗತಿ-22, 7ನೇ ತರಗತಿ-2, 8ನೇ ತರಗತಿ-1, 9ನೇ ತರಗತಿ-3 ಹಾಗೂ |

...3

| | | |
|---|---|---|
| | | 10ನೇ ತರಗತಿ-6) ಕೋವಿಡ್ 19 ಲಾಕ್ ಡೌನ್ ಹಿನ್ನೆಲೆಯಲ್ಲಿ 6ನೇ ತರಗತಿಯ ದಾಖಲಾತಿ ಪ್ರಕ್ರಿಯೆ ವಿಳಂಬವಾಗಿದ್ದು, 2021-22ನೇ ಸಾಲಿನ ದಾಖಲಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಈ ಶಾಲೆಗೆ 25 ಬೋಧಕ /ಬೋಧಕೇತರ ಹುದ್ದೆಗಳು ಮಂಜೂರಾಗಿದ್ದು, ಹುದ್ದೆವಾರು, ಸಿಬ್ಬಂದಿವಾರು ಮಾಹಿತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ. |
| ಉ) | ಶಾಲೆಯಲ್ಲಿ ಮಕ್ಕಳ ರಕ್ಷಣೆಗೆ, ಸುರಕ್ಷತೆಗೆ ಹಾಗೂ ಯಾವುದೇ ರೀತಿಯ ಕಿರುಕುಳಗಳು ಆಗದಂತೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿನ ವಸತಿಶಾಲೆ/ಕಾಲೇಜುಗಳಲ್ಲಿವಿದ್ಯಾಭ್ಯಾಸಮಾಡುತ್ತಿರುವವಿದ್ಯಾರ್ಥಿಗಳರಕ್ಷಣೆಗೆ, ಸುರಕ್ಷತೆಗಾಗಿ ಎಲ್ಲಾ ವಸತಿ ಶಾಲೆಗಳಲ್ಲಿ ಕಾವಲುಗಾರರನ್ನು ನೇಮಿಸಿಕೊಳ್ಳಲಾಗಿರುತ್ತದೆ. ಸುರಕ್ಷತೆಗಾಗಿ ವಸತಿಶಾಲೆ /ಕಾಲೇಜುಗಳ ಒಳಗಡೆ ಅನುದಾನದ ಲಭ್ಯತೆ ಅನುಸಾರವಾಗಿ ಸಿಸಿ ಕ್ಯಾಮರಗಳನ್ನು ಅಳವಡಿಸಲಾಗಿದೆ.<br><br>ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣೆ ಮಾಡಿಕೊಳ್ಳಲು ಪೋಲಿಸ್ ಇಲಾಖೆಯಿಂದ ತರಬೇತಿ ಕಾರ್ಯಾಗಾರಗಳನ್ನು ನಡೆಸಲಾಗಿರುತ್ತದೆ. ಅಲ್ಲದೇ ಪ್ರಾರಂಭಿಕವಾಗಿ 300 ವಸತಿಶಾಲೆ /ಕಾಲೇಜುಗಳಲ್ಲಿನ ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣೆಗಾಗಿ ಕರಾಟೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br><br>ಸರ್ಕಾರದಪತ್ರಸಂಖ್ಯೆ: ಸಕಇ442ಪಕವಿ2018ದಿ:15.09.2018 ರನ್ವಯ ರಾಜ್ಯ ಮಕ್ಕಳ ರಕ್ಷಣಾ ನೀತಿ-2016ರ ನಿಯಮದಂತೆ ವಸತಿಶಾಲೆ/ ಕಾಲೇಜುಗಳಲ್ಲಿ ಶಾಲಾ ನಿರ್ವಹಣಾ ಸಮಿತಿ/ ಪೋಷಕ ಶಿಕ್ಷಕರ ಸಂಘವನ್ನು ರಚಿಸಿ, ಮಕ್ಕಳ ಸುರಕ್ಷತೆಗೆ ಕ್ರಮವಹಿಸುವಂತೆ ಸಂಘದ ಅಧಿಕೃತ ಜ್ಞಾಪನ ಪತ್ರದಿ:13.03.2017, ದಿ: 26.10.2018 ಹಾಗೂ 17.07.2021ರ ಕಛೇರಿ ಪತ್ರಗಳಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಎಲ್ಲಾ ವಸತಿಶಾಲೆ /ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿರುತ್ತದೆ. |

ಸಂಖ್ಯೆ:ಹಿಂವಕ 744ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು